ರಾಜ್ಯದಲ್ಲಿರುವ ಸರ್ಕಾರಿ ಕಾರ್ಖಾನೆಗಳ ಸಂಖ್ಯೆ

1379 (1713) ಶ್ರೀ ಚಂದ್ರಶೇಕರಪ್ಪ ಹೆಚ್. ಎಂ. (ಶಿವಮೊಗ್ಗ) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸರ್ಕಾರದ ಕಾರ್ಖಾನೆಗಳು ರಾಜ್ಯದ ಯಾವ ಜಿಲ್ಲೆಯಲ್ಲಿವೆ ಮತ್ತು ಇವುಗಳ ಸಂಖ್ಯೆ ಎಷ್ಟು;

ಆ) ಸರ್ಕಾರನಡೆಸುತ್ತಿರುವ ಕಾರ್ಖಾನೆಯು ನಷ್ಟದಲ್ಲಿರಲು ಕಾರಣಗಳೇನು;

ಇ) ಕಾರ್ಖಾನೆಗಳನ್ನು ಬೆಂಗಳೂರು ಮತ್ತು ಮೈಸೂರಲ್ಲಿ ಪ್ರಾರಂಭಿಸಲು ಆಧ್ಯತೆ ನೀಡಿದಂತೆ ಬೇರೆ ಜಿಲ್ಲೆಗಳಲ್ಲಿ ಪ್ರಾರಂಭಿಸಲು ಅವಕಾಶ ನೀಡಲಾಗುವುದೇ?

ಶ್ರೀ ಎಸ್. ಎಂ. ಕೃಷ್ಣ (ಮುಖ್ಯ ಮಂತ್ರಿಗಳು) :

ಅ) ಕರ್ನಾಟಕ ರಾಜ್ಯ ಸಾರ್ವಜನಿಕ ಉದ್ದಿಮೆಗಳು ಮಹೋದ್ಯದ ವ್ಯಾಪ್ತಿಯಲ್ಲಿ 78 ಸಾರ್ವಜನಿಕ ಉದ್ದಿಮೆಗಳು ಇರುತ್ತವೆ. ವಿವಿಧ ಜಿಲ್ಲೆಗಳಲ್ಲಿನ ಉದ್ದಿಮೆಗಳು ಈ ಕೆಳಕಂಡಂತೆ ಇರುತ್ತದೆ.

ಜಿಲ್ಲೆ	ಉದ್ದಿಮೆಗಳ ಸಂಖ್ಯೆ
ಬೆಂಗಳೂರು	69
ಮೈಸೂರು	02
ದಕ್ಷಿಣಕನ್ನಡ(ಮಂಗಳೂರು)	01
ಬಿಜಾಪುರ	01
ಉತ್ತರಕನ್ನಡ(ದಾಂಡೇಲಿ)	01
ಶಿವಮೊಗ್ಗ	01
ಧಾರವಾಡ	03
ಒಟ್ಟು	**78**

ಆ) 1997-98ನೆಯ ಸಾಲಿನಲ್ಲಿ ಒಟ್ಟು 78 ಸಾರ್ವಜನಿಕ ಉದ್ದಿಮೆಗಳಲ್ಲಿ 33 ಉದ್ದಿಮೆಗಳು 197.20 ಕೋಟಿ ರೂಗಳ ನಿವ್ವಳ ನಷ್ಟವನ್ನು ಅನುಭವಿಸಿದೆ. ಉದ್ಯಮವೊಂದು ನಷ್ಟಹೊಂದಲು ತನ್ನದೇ ಆದ ನಿರ್ದಿಷ್ಟಕಾರಣಗಳು ಇರುತ್ತದೆ. ಆದಾಗ್ಯೂ ಉದ್ಯಮಗಳ ನಷ್ಟಕ್ಕೆ ಸಾಮಾನ್ಯಕಾರಣಗಳು ಕೆಳಕಂಡಂತೆ ಇದೆ.

1. ಸರ್ಕಾರ ಆಗಿಂದ್ದಾಗ್ಗೆ ಘೋಷಿಸುವ ಸಾಮಾಜಿಕ ಮತ್ತು ಆರ್ಥಿಕ ಧ್ಯೇಯೋದ್ದೇಶಗಳ ಮೇಲಿನ ಬದ್ಧತೆ ಮತ್ತು ಅನುಷ್ಠಾನ.
2. ಸಾರ್ವಜನಿಕ ಉದ್ಯಮಗಳ ಮಾದರಿ ಉದ್ಯೋಗದಾತನಾಗಿ(ಮಾಡಲ್ ಎಂಪ್ಲಾಯರ್) ಕಾರ್ಯ ನಿರ್ವಹಿಸಬೇಕಾಗಿರುವುದು.
3. ಕೆಲವು ಘಟಕಗಳಲ್ಲಿ ಅತಿಯಾದ ಕಾರ್ಮಿಕ ವರ್ಗ.

4. ಉದ್ದಿಮೆಗಳ ಮಂಡಳಿಗಳಲ್ಲಿ ವೃತ್ತಿ ಪರಿಣಿತರ ಪ್ರಾತಿನಿಧ್ಯದಲ್ಲಿ ಅಭಾವ.

5. ವ್ಯವಸ್ಥಾಪಕ ತಂತ್ರಗಾರಿಕೆ ಯಂತ್ರೋಪಕರಣ ಮುಂತಾದ ವಲಯದಲ್ಲಿ ಆಧುನೀಕರಣವನ್ನು ಅಳವಡಿಸುವಲ್ಲಿ ಹಣಕಾಸಿನ ಕೊರತೆ.

6. ಹೊಸ ಪ್ರವೃತ್ತಿಯಲ್ಲಿ ತೊಡಗಿಸಿಕೊಳ್ಳುವಲ್ಲಿ ಅರಿವಿನ ಕೊರತೆ.

7. ಸೂಕ್ತ ಜನಶಕ್ತಿ ಮತ್ತು ಸರಕು ಮುಂತಾದ ಸಂಪನ್ಮೂಲಗಳ ಕೊರತೆ.

8. ವಿವಿಧ ಕಾರಣದಿಂದಾಗಿ ಉನ್ನತ ಮಟ್ಟದ ನಿರ್ವಾಹಕ ಅಧಿಕಾರ ಸ್ಥಾನದಲ್ಲಿರಲು ಕನಿಷ್ಠ ಭರವಸೆ ಅವಧಿ ಮಾಡುವಲ್ಲಿ ಕೊರತೆ.

9. ಮಾರುಕಟ್ಟೆಯ ಇತಿಮಿತಿಗಳು.

ಇ) ಪ್ರಾದೇಶಿಕ ಸರ್ವತೋಮುಖ ಅಭಿವೃದ್ಧಿಗೆ ಸರ್ಕಾರವು ಕ್ರಮಕೈಗೊಂಡಿದ್ದು, ಈ ವಿಷಯದಲ್ಲಿ ಆದ್ಯತೆ ನೀಡಲಾಗುವುದು.

ತುಂಗಾನಾಲೆಗೆ ದುರಸ್ತಿ ಪಡಿಸಲು ನಿಗಧಿಯಾದ ಅನುದಾನ

1380 (1714) ಶ್ರೀ ಚಂದ್ರಶೇಖರಪ್ಪ ಹೆಚ್. ಎಂ (ಶಿವಮೊಗ್ಗ) : ಮಾನ್ಯ ಬೃಹತ್ ಮತ್ತು ಮಧ್ಯಮ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ತುಂಗಾ ನಾಲೆಗಳು, ಉಪ ನಾಲೆಗಳು, ನಾಲಾ ರಸ್ತೆಗಳ ದುರಸ್ತಿಗೆ ವರ್ಷಕ್ಕೆ ನಿಗಧಿ ಪಡಿಸಲಾಗುವ ಅನುದಾನವನ್ನು ಯಾವ ಆಧಾರದ ಮೇಲೆ ನಿಗಧಿ ಪಡಿಸಲಾಗುವುದು;

ಆ) ಇವುಗಳ ದುರಸ್ತಿಯ ಕಾಮಗಾರಿಗಳನ್ನು ಕೈಗೆತ್ತಿಕೊಂಡು ದುರಸ್ತಿ ಮಾಡಲಾಗುವುದೆ;

ಇ) ಹಾಗಿಲ್ಲದಿದ್ದಲ್ಲಿ ಅದಕ್ಕೆ ಕಾರಣಗಳೇನು?

ಶ್ರೀ ಎಚ್. ಕೆ. ಪಾಟೀಲ್ (ಬೃಹತ್ ಮತ್ತು ಮಧ್ಯಮ ನೀರಾವರಿ ಮಂತ್ರಿಗಳು) :

ಅ) ತುಂಗಾ ನಾಲೆಗಳ ಮತ್ತು ಉಪನಾಲೆಗಳ ದುರಸ್ತಿಗಾಗಿ ವಾರ್ಷಿಕ ಅನುದಾನವನ್ನು ಯೋಜನೆಯ ಅಧಿಕತ ಅಚ್ಚುಕಟ್ಟು ಪ್ರದೇಶದ ಆಧಾರದ ಮೇಲೆ ನಿಗಧಿ ಪಡಿಸಿ ಅನುದಾನವನ್ನು ಬಿಡುಗಡೆಗೊಳಿಸಲಾಗುವುದು. ಈ ಅನುದಾನವು ವಾರ್ಷಿಕ ನಿರ್ವಹಣೆ ಮತ್ತು ದುರಸ್ತಿಯನ್ನು ಒಳಗೊಂಡಿರುತ್ತದೆ.

ತುಂಗಾ ನಾಲೆ ರಸ್ತೆಗಳ ದುರಸ್ತಿಗಾಗಿ ಅನುದಾನವನ್ನು ಯೋಜನೆಯ ಒಟ್ಟು ನಾಲಾ ರಸ್ತೆಗಳ ಉದ್ದದ ಆಧಾರದ ಮೇಲೆ ನಿಗಧಿಪಡಿಸಿಅನುದಾನವನ್ನು ಬಿಡುಗಡೆಗೊಳಿಸಲಾಗುವುದು. ಈ ಅನುದಾನವು ವಾರ್ಷಿಕ ನಿರ್ವಹಣೆ ಮತ್ತು ದುರಸ್ತಿಯನ್ನು ಒಳಗೊಂಡಿರುತ್ತದೆ.

ಆ) ತುಂಗಾ ನಾಲೆಗಳ ಉಪನಾಲೆಗಳ ಹಾಗೂ ನಾಲಾ ರಸ್ತೆಗಳ ದುರಸ್ತಿ ಕಾಮಗಾರಿಗಳನ್ನು ಕೈಗೊಂಡು ದುರಸ್ತಿ ಮಾಡಲಾಗಿದೆ.

ಇ) ಉದ್ಭವಿಸುವುದಿಲ್ಲ.